


# ಯಕ್ಷಿಣಿ ಕನ್ನಡಿ

ಬೀದಿ ಬದಿ ಬಿದ್ದಿದ್ದ
ಚೂರು ಕನ್ನಡಿಯ ಗಕ್ಕನೆತ್ತಿಕೊಂಡಿತು ಮಗು,
'ಚುಚ್ಚಿಕೊಂಡೀಯೆ ಬಿಸಾಡದನ್ನು'
ತಾಯಿಯ ತಾಕೀತು.

ಏನು ಸೆಳೆತ ಹೊಳೆವ ಕನ್ನಡಿಯಲ್ಲಿ!
ತಿರುಗಿಸಿ ಹೊರಳಿಸಿ ಅತ್ತಿಂದಿತ್ತ ಮಗು ನೋಡುತ್ತಿತ್ತು
ಕೋಮಲ ಬೊಗಸೆಯೊಳಗಿನ ಕಿನ್ನರಿಯನ್ನು,
ಕಣ್ಣುಕುಕ್ಕಿ ಕನ್ನಡಿ ಏಕಾಏಕಿ ಕೋರಯಿಸಿ ಮಿಂಚು
ಅಲ್ಲಿಂದಲೇ ಶುರುವಾದದ್ದು ಮಗುವಿನೊಳಗೆ
ಕತ್ತಲುಬೆಳಕಿನಾಟ.

ತುಂಡು ಮೋಡದೊಳಗೆ ರೊಂಯ್ಯನೆ ಹಾರಿದ
ಹಕ್ಕಿ ಆ ಕನ್ನಡಿಯೊಳಗೆ,
ನಿಜವೋ ಮಾಯೆಯೋ ತಿಳಿಯುವುದು ಹೇಗೆ ಮಗು?
ಕನ್ನಡಿಯೊಳಗೆ ಹಣಕಿದ ಮಗುವಿಗೆ ಕಂಡಿತ್ತು
ಅದರೊಳಗೆ ತನ್ನದೇ ಕಣ್ಣು,
ಅಲ್ಲೇ ಹಿಂಬದಿಯಲ್ಲಿ ಮರದ ತುಂಡು ರೆಂಬೆ,
ಪಟಗುಡುವ ಅರೆಬರೆ ಎಲೆ,
ಪತಂಗದ ಪದರಾಟ.

ಹಾಗೇ ತಿರುಗಿಸಿತು ಮಗು
ಅಂಗೈಯ ಯಕ್ಷಲೋಕವನ್ನು ಹೊಸ್ತಿಲಿನೊಳಕ್ಕೆ,
ಬೆಳಕ ಹೀರಿದ ಕನ್ನಡಿ
ಒಳಮನೆಯ ಕತ್ತಲಿಗೆ ಮುತ್ತಿಕ್ಕಿ
ಅಲ್ಲಿ ಅಂದು ಹೊಸಬೆಳಗು:
ನಿಟ್ಟುನಿಟ್ಟಲ್ಲಿ ಬಚ್ಚಿಟ್ಟುಕೊಂಡ ಗುಟ್ಟುಗಳೆಲ್ಲ
ಈಗ ಮಗುವಿನಂಗೈ ಕನ್ನಡಿಯೊಳಗಿನ ಕವಿತೆ.

● ತೇಜಶ್ರೀ, ಹಾಸನ